

**ಸಂಘರ್ಷ ನಡೆದ ಪ್ರದೇಶದ ಸಮೀಪವೇ ಚೀನಾ ಭಾರೀ ಪ್ರಮಾಣದಲ್ಲಿ ಯುದ್ಧೋಪಕರಣಗಳು, ಸೈನಿಕರ ಸಾಗಾಟಕ್ಕೆ ಬಳಸುವ ಟ್ರಕ್‌ಗಳು ಸೇರಿದಂತೆ ಯುದ್ಧೋಪಕರಣಗಳನ್ನು ನಿಯೋಜಿಸಿದೆ. ಭಾರತವೂ ಸೇನಾ ನಿಯೋಜನೆಯನ್ನು ತೀವ್ರಗೊಳಿಸಿದೆ**



ಯತ್ನಗಳ ಹಿಂದಿದ್ದ ನಿಜವಾದ ಉದ್ದೇಶ ಅರಿಯಲು ವಿಫಲವಾದ ಭಾರತ ಮತ್ತು ಪಾಶ್ಚಿಮಾತ್ಯ ದೇಶಗಳು, 'ದಕ್ಷಿಣ ಏಷ್ಯಾದಲ್ಲಿ ಕಮ್ಯುನಿಸಂ ಹರಡುವ ಮಾವೋ ಪ್ರಯತ್ನವಿದು' ಎಂದು ಲೆಕ್ಕಾಚಾರ ಹಾಕಿಕೊಂಡವು.

ಚೀನಾದ ಸೇನಾಪಡೆಗಳು ಮ್ಯಾಕ್‌ಮೊಹನ್ ರೇಖೆ ಉಲ್ಲಂಘಿಸಿ ಭಾರತದ ಭೂಪ್ರದೇಶಕ್ಕೆ ಮುಂದೊತ್ತಿ ಬಂದು ಗಸ್ತು ಠಾಣೆಗಳನ್ನು ನಿರ್ಮಿಸಿಕೊಂಡವು. ಹಲವು ಕಣಿವೆಗಳು ಮತ್ತು ನಗರಗಳನ್ನು ವಶಕ್ಕೆ ತೆಗೆದುಕೊಂಡವು. ಒಂದು ತಿಂಗಳ ಯುದ್ಧದಲ್ಲಿ ಭಾರತದ 1000ಕ್ಕೂ ಹೆಚ್ಚು ಯೋಧರು ಹುತಾತ್ಮರಾದರು. 3000 ಮಂದಿಯನ್ನು ಯುದ್ಧಕೈದಿಗಳಾಗಿ ಚೀನಾ ಬಂಧಿಸಿತ್ತು. ಚೀನಾ ಪಾಳಯದಲ್ಲಿ ಸತ್ತವರ ಸಂಖ್ಯೆ 800ಕ್ಕೂ ಕಡಿಮೆಯಿತ್ತು.

ಚೀನಾ ಪ್ರಧಾನಿ ಝ್ಹೂ ಎನ್‌ಲೈ ನವೆಂಬರ್ ತಿಂಗಳಲ್ಲಿ ಏಕಪಕ್ಷೀಯವಾಗಿ ಕದನ ವಿರಾಮ ಘೋಷಿಸಿದರು. ಚೀನಾ ಪಡೆಗಳು ಎಲ್ಲೆಲ್ಲಿ ನೆಲೆ ನಿಂತಿವೆಯೋ ಅದೇ ಹೊಸ ಗಡಿರೇಖೆ ಎಂದು ಚೀನಾ ಅನಧಿಕೃತವಾಗಿ ಸಾರಿ ಹೇಳಿತು. ಅಲ್ಲಿಂದಾಚೆಗೆ ವಾಸ್ತವ ನಿಯಂತ್ರಣ ರೇಖೆ (ಲೈನ್ ಆಫ್ ಆಕ್ಚುವಲ್ ಕಂಟ್ರೋಲ್– ಎಲ್‌ಎಸಿ) ಚಾಲ್ತಿಗೆ ಬಂತು.

## 1967: ಚೀನಾಕ್ಕೆ ಭಾರತದ ಪೆಟ್ಟು

ಚೀನಾದ ಟಿಬೆಟ್ ಸ್ವಾಯುತ್ತ ಪ್ರಾಂತ್ಯ ಮತ್ತು